# ಜಾತಿ

ಹೊರೆಯಾಲ ದೊರೆಸ್ವಾಮಿ

ಕಲೆ: ಸಂತೋಷ್ ಸಸಿಹಿತ್ಲು

ನನ್ನ ಬಾಲ್ಯದ ನೆನಪುಗಳಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವ ಒಂದು ಘಟನೆ—ನಮ್ಮ ದೇಶದ ಜನಮನದಲ್ಲಿ ವ್ಯಾಪಕವಾಗಿ ತಳವೂರಿರುವ ಜಾತಿಗೆ ಸಂಬಂಧಿಸಿದ್ದು. ಜಾತಿ ಎಂಬ ಪದ ಹಾಗೂ ಅಮೂರ್ತವಾದ ಅದರ ಉಡು ಹಿಡಿತ ಮತ್ತು ಆ ಕುರಿತ ಆಚರಣೆಗಳು ನಮ್ಮ ದೇಶದ ಒಟ್ಟಾರೆ ಪುರೋಗಾಮಿಯಾದ ಚಿಂತನೆ ಹಾಗೂ ನಡೆಗೆ ಬಹುದೊಡ್ಡ ತೊಡಕಾಗಿವೆ ಎಂಬುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವಂಥದೇ. ಈ ಕುರಿತು ಯಾವ ವಿವರಣೆಯನ್ನಾಗಲಿ, ವ್ಯಾಖ್ಯಾನವನ್ನಾಗಲಿ ಮಾಡದೆ ಬಾಲ್ಯದ ಘಟನೆಯತ್ತ ಕೇಂದ್ರೀಕರಿಸಿ ಬರೆಯುತ್ತಿದ್ದೇನೆ. ಆ ಘಟನೆ ಹೀಗಿದೆ: ನಾನಾಗ ನಮ್ಮ ಊರಿನಲ್ಲಿ ಮೂರನೆಯ ತರಗತಿಯಲ್ಲಿ ಓದುತ್ತಿದ್ದೆ. ಓದಿನ ಜೊತೆಗೆ ಗೋಲಿ ಆಟ, ಬುಗುರಿ ಆಟ, ಕೋಲ್ ಚೆಂಡಿನ ಆಟ, ಗಟಾಟ (ಚೌಕಾಬಾರ), ರಾಮನ ಚೆಂಡು–ಭೀಮನ ಚೆಂಡಿನ ಆಟ (ಮೈಸೂರು ಚೆಂಡಾಟ ಎಂದೂ ಹೆಸರಿದೆ) ಈ ಮೊದಲಾದ ಆಟಗಳನ್ನು

